## ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ವಕ್ವಾಡಿ ಶ್ರೀನಿವಾಸ ಶೆಟ್ಟಿ ಅವರು ದಿನಾಂಕ 12.09.1995ರಂದು ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

ಶ್ರೀಯುತರು ಸಮಾಜವಾದಿ ನಾಯಕರಾಗಿದ್ದು, 1957ರಿಂದ 1962ರವರೆಗೆ ಕುಂದಾಪುರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದರು. ಹಲವಾರು ಸಂಘ ಸಂಸ್ಥೆಗಳ ಮುಖ್ಯಸ್ಥರಾಗಿದ್ದ ಶ್ರೀಯುತರು ಭೂ ಸುಧಾರಣೆ ಜಾರಿಗೆ ಬರಲು ಹೆಚ್ಚಿನ ಶ್ರಮ ವಹಿಸಿದ್ದರು ಹಾಗೂ 'ಭೂ ಸುಧಾರಣೆ ಏತಕ್ಕಾಗಿ,' '1956ರ ಮದರಾಸ್ ಟೆನೆನ್ಸಿ ಆಕ್ಟ್' ಮತ್ತು 'ಯುವರ್ ವೋಟ್' ಎಂಬ ಪುಸ್ತಕಗಳನ್ನು ಕನ್ನಡದಲ್ಲಿ ರಚಿಸಿದ್ದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಏದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಕಾಲ ಮೌನವನ್ನಾಚರಿಸಿತು)

ಈ ಸದನ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

## ವಾಸುದೇವನ್ ಪ್ರಕರಣದ ಬಗ್ಗೆ - ನಿಲುವಳಿ ಸೂಚನೆ ಮಂಡನೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ನಾನು ಈಗ ತಾನೇ ಪ್ರಸ್ತಾಪ ಮಾಡುತ್ತಿದ್ದೆ, ಈಗ ನಾವು ವಾಸುದೇವನ್ ಪ್ರಕರಣದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಅತ್ಯಂತ ಪ್ರಮುಖರಾದ ಅನೇಕ ವಿಷಯಗಳಿದ್ದಾವೆ ಎನ್ನುವುದು ನನಗೆ ಗೊತ್ತಿದೆ. ಆದರೆ, ತಾವು ಹಿಂದೆ ಅನೇಕ ಸಂದರ್ಭಗಳಲ್ಲಿ ಇಂತಹ ವಿಶೇಷ ಸಂದರ್ಭ ಬಂದಾಗ ಅದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಮತ್ತೆ ನೆನ್ನೆ ಉಪ ಮುಖ್ಯಮಂತ್ರಿಗಳೂ ಸಹ ಮುಖ್ಯಮಂತ್ರಿಗಳು ಬಂದ ತಕ್ಷಣ ಹೇಳಿಕೆಯನ್ನು ಕೊಡಿಸುತ್ತೇವೆಂದು ಹೇಳಿದ್ದರು. ಕಳೆದ ಮೂರು ನಾಲ್ಕು ದಿವಸದಿಂದ ಅವರು ಇದೇ ಹಿನ್ನೆಲೆ ಮೇಲೆ ದೆಹಲಿಗೆ ಹೋಗಿದ್ದಾರೆ. ಏನಾಯಿತು ಯಾರ್ಯಾರನ್ನು ಭೇಟಿ ಮಾಡಿದ್ದರು ಏನು ಆಗಿದೆ, ಏನೂ ಇಲ್ಲ. ಇಷ್ಟೆಲ್ಲಾ ಪ್ರಯತ್ನವಾದರೂ ಸಹ ವಾಸುದೇವನ್ ಅಂತೂ ಜೈಲಿಗೆ ಹೋಗುವುದು ತಪ್ಪಲಿಲ್ಲ. ಇವತ್ತು ಮತ್ತೆ ಅವರು ಅರ್ಜಿಗಳನ್ನು ಹಾಕಿರಬಹುದು ಅವರು ಜೈಲಿಗೆ ಹೋಗಿದ್ದಾರೆ. ಒಂದು ತಿಂಗಳ ಶಿಕ್ಷೆ ಇದ್ದುದ್ದು ಇಪ್ಪತ್ತೊಂಬತ್ತು ದಿವಸಗಳಾಗಬಹುದು ಅಥವಾ ಒಂದೇ ದಿವಸಕ್ಕೆ ಆಗಬಹುದು, ಆದರೆ ಶಿಕ್ಷೆಯಂತೂ ಆಗಿದೆ, ಅವರು ಜೈಲಿನ ಒಳಗೆ ಹೋಗಿಯೂ ಆಗಿದೆ. ನನಗೇನು ಅನ್ನುಸುತ್ತಿದೆ, ಸನ್ಮಾನ್ಯ ಅಧ್ಯಕ್ಷರೆ, ಇವತ್ತು, ಈ ಒಂದು ಜೈಲು ವಾಸವನ್ನು ಕರ್ನಾಟಕದ ಒಬ್ಬ ಅಧಿಕಾರಿ ಅನುಭವಿಸುವಂತಹ ಒಂದು ಪರಿಸ್ಥಿತಿ, ಸರ್ಕಾರದ ಸಮಯ ಪ್ರಜ್ಞೆಯ ಅಭಾವದಿಂದ, ಈ ನ್ಯಾಯಾಲಯದ ತೀರ್ಪನ್ನು ಉಪೇಕ್ಷಿಸುವ ರೀತಿಯಲ್ಲಿ ಇವರು ನಡೆದುಕೊಂಡಿದ್ದರಿಂದ, ಹಾಗೂ ಈ ಸರ್ಕಾರದ ವೈಫಲ್ಯತೆಯಿಂದ ಇದೆಲ್ಲಾ ಆಗಿದೆ ಎನ್ನುವುದು ನನ್ನ ಭಾವನೆ.